RNU AIR DHARWAD

SEPTEMBER 06, 2025

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ವಿಜಯಪುರ ಜಿಲ್ಲೆ, ಆಲಮಟ್ಟಿಯ, ಲಾಲಬಹಾದ್ದೂರ ಶಾಸ್ತ್ರೀ ಜಲಸಂಗ್ರಾಹಾಗಾರ ಭರ್ತಿಯಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಇನ್ನು ಕೆಲವೇ ನಿಮಿಷಗಳಲ್ಲಿ ಆಲಮಟ್ಟಿ ತಲುಪಿ, ಬಾಗಿನ ಅರ್ಪಿಸಲಿದ್ದಾರೆ. ಜಲ ಸಂಪನ್ಮೂಲ ಖಾತೆ ಸಚಿವ ಡಿ.ಕೆ.ಶಿವಕುಮಾರ, ಬಾಗಲಕೋಟೆ ಜಿಲ್ಲೆ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪೂರ, ವಿಜಯಪುರ ಜಿಲ್ಲೆ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ ಸೇರಿದಂತೆ, ಅನೇಕ ಗಣ್ಯರು, ಗಂಗಾ ಪೂಜೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

<><><>

ಧಾರವಾಡ ಜಿಲ್ಲೆ ಉಸ್ತುವಾರಿ ಸಚಿವ ಸಂತೋಷ ಲಾಡ, ಹುಬ್ಬಳ್ಳಿಯಿಂದ ಧಾರವಾಡದ ವರೆಗೆ, ಈ ಬೆಳಗ್ಗೆ ನಗರ ಸಾರಿಗೆ ಬಸ್ ನಲ್ಲಿ ಸಂಚರಿಸಿ, ಪ್ರಯಾಣಿಕರೊಂದಿಗೆ ಸಮಾಲೋಚಿಸಿದರು. ಸಾರ್ವಜನಿಕರ ಕುಂದು–ಕೊರತೆ ಆಲಿಸಿದರು.

<><><>

ಹನಿ ಹಾಗೂ ತುಂತುರು ನೀರಾವರಿ ವ್ಯವಸ್ಥೆಗಳ ಮೇಲಿನ, ಸರಕು ಮತ್ತು ಸೇವಾ ತೆರಿಗೆ, ಜಿ.ಎಸ್.ಟಿ.ಯನ್ನು, ಶೇಕಡ 12 ರಿಂದ ಶೇಕಡ 5ಕ್ಕೆ, ಇಳಿಸಲಾಗಿದೆ. ರೈತರು ಆಧುನಿಕ ತಂತ್ರಜ್ಞಾನ ಹಾಗೂ ಕೈಗೆಟುಕುವ ದರದಲ್ಲಿ, ನೀರು ಉಳಿಸುವ ತಾಂತ್ರಿಕತೆ ಅಳವಡಿಸಿಕೊಳ್ಳಲು, ಬೆಳೆ ಇಳುವರಿ ಸುಧಾರಿಸಲು ಮತ್ತು ಸುಸ್ಥಿರ ಕೃಷಿಯತ್ತ ಸಾಗಲು ಅನುವು ಮಾಡಿಕೊಡಲಿದೆ.

<><><>

ಟ್ರ್ಯಾಕ್ಟರ್ ಬಿಡಿಭಾಗಗಳ ಮೇಲಿನ, ಜಿ.ಎಸ್.ಟಿ.ಯನ್ನು ಶೇಕಡ 18 ರಿಂದ ಶೇಕಡ 5ಕ್ಕೆ ಇಳಿಸಲಾಗಿದೆ. ಟ್ರ್ಯಾಕ್ಟರ್ ಟೈರ್, ಟ್ಯೂಬ್, ಹೈಡ್ರಾಲಿಕ್ ಪಂಪ್ ಹಾಗೂ ಇನ್ನಿತರ ಕೃಷಿ ಪರಿಕರಗಳು, ರೈತರಿಗೆ ಕೈಗೆಟುಕುವ ದರದಲ್ಲಿ ಲಭ್ಯವಾಗಲಿವೆ ಎಂದು, ಕೇಂದ್ರ ವಾರ್ತಾ ಶಾಖೆ, ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದೆ.

<><><>

ಬದಲಾಗುತ್ತಿರುವ ಜಾಗತಿಕ ಸನ್ನಿವೇಶದಲ್ಲಿ, ಜಿ.ಎಸ್.ಟಿ. ಸುಧಾರಣೆ, ಕ್ರಾಂತಿಕಾರಿ ಬದಲಾವಣೆ; ಜನಸಾಮಾನ್ಯರ ನಿತ್ಯದ ಬಳಕೆ ವಸ್ತುಗಳು, ಅಗತ್ಯ ಸೇವೆಗಳ ದರ ಕಡಿಮೆ ಆಗಿ, ದೇಶದ ಆರ್ಥಿಕ ವ್ಯವಸ್ಥೆಗೆ ಹೊಸ ಚೈತನ್ಯ ದೊರಕಲಿದೆ ಎಂದು, ವಿಧಾನಸಭೆ ವಿಪಕ್ಷ ನಾಯಕ ಆರ್. ಅಶೋಕ, ಹೇಳಿದ್ದಾರೆ.

<><><>

ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ, 'ಸಶಕ್ತ ಜೀವನಕ್ಕಾಗಿ, ಸರಿಯಾದ ಆಹಾರ' ಧ್ಯೇಯದೊಂದಿಗೆ, ಒಂದು ವಾರ ಕಾಲ ಆಯೋಜಿಸಿದ, ರಾಷ್ಟ್ರೀಯ ಪೌಷ್ಟಿಕಾಂಶ ಸಪ್ತಾಹ, ನಾಳೆ ಸಂಪನ್ನಗೊಳ್ಳಲಿದೆ.

<><><>

ಬೆಂಗಳೂರಿನ ಬಿ.ಆರ್. ಅಂಬೇಡ್ಕರ್ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಆಸ್ಪತ್ರೆಯ, ಪೌಷ್ಟಿಕಾಂಶ ಆಹಾರ ತಜ್ಞೆ, ಶ್ವೇತಾ ಕ್ಯಾತನಗೌಡರ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

ಶ್ವೇತಾ ಕ್ಯಾತನಗೌಡರ ಧ್ವನಿ 45 ಸೆಕೆಂದುಗಳು

<><><>

ಗರ್ಭಾವಸ್ಥೆಯಿಂದ, ಮಗುವಿನ ಮೊದಲ ಜನ್ಮ ದಿನದ ವರೆಗೆ, ಉಚಿತ ಆರೋಗ್ಯ ಸಲಹೆಗಳನ್ನು, ಈಗ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,  ಮೊಬೈಲ್ ನಲ್ಲಿಯೇ ಒದಗಿಸುತ್ತಿದೆ. ಕಿಲ್ಕಾರಿ ಸಂಖ್ಯೆ, 1600 103 660 ಕರೆ ಮಾಡಿ, ವಾರದ ಕರೆಗಳನ್ನು, ಗರ್ಭಿಣಿಯರು ಹಾಗೂ ತಾಯಂದಿರು, ಕೇಳಿಸಿಕೊಳ್ಳುವಂತೆ, ಮನವಿ ಮಾಡಲಾಗಿದೆ.

<><><>

ಜನರ ಅನುಕೂಲಕ್ಕಾಗಿ "ಪ್ರಗತಿಪಥ", ನಿಸರ್ಗದ ಸಮತೋಲನಕ್ಕಾಗಿ, "ಹಸಿರು ಪಥ" ಯೋಜನೆ, ಜಾರಿಗೊಳಿಸಲಾಗಿದೆ ಎಂದು, ಗ್ರಾಮೀಣಾಭಿವೃದ್ಧಿ ಖಾತೆ ಸಚಿವ ಪ್ರಿಯಾಂಕ ಖರ್ಗೆ ತಿಳಿಸಿದ್ದಾರೆ. ಅಭಿವೃದ್ಧಿ, ನಿಸರ್ಗವನ್ನು ಒಳಗೊಂಡಾಗ ಮಾತ್ರ, ಸುಸ್ಥಿರ ಬದುಕಿನ ಭರವಸೆ ನೀಡಬಹುದು. ಹಸಿರು ಪಥ ಯೋಜನೆಯಡಿ, ಕಲಬುರಗಿ ಜಿಲ್ಲೆ, ಚಿತ್ತಾಪುರ ತಾಲೂಕಿನ, ಗ್ರಾಮೀಣ ರಸ್ತೆಗಳ ಇಕ್ಕೆಲಗಳಲ್ಲಿ, ಉತ್ತಮ ತಳಿಯ ಗಿಡಗಳನ್ನು ನೆಡಲಾಗಿದೆ. ಗಿಡಗಳ ನಿಗಾ ವಹಿಸಲು ಜಿಯೋ ಟ್ಯಾಗಿಂಗ್ ಮಾಡಲಾಗಿದೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ, 28 ಲಕ್ಷ ಗಿಡಗಳನ್ನು, ರಸ್ತೆ ಬದಿ ಹಾಗೂ ಸರ್ಕಾರಿ ಭೂಮಿಯಲ್ಲಿ ನೆಟ್ಟು ಪೋಷಿಸಲಾಗುತ್ತಿದೆ, ಎಂದಿದ್ದಾರೆ.

<><><>

ವಿಜಯಪುರ ಜಿಲ್ಲೆ, ತಿಡಗುಂದಿ ಅಕ್ವಾಡಕ್ಟ್ ಮೂಲಕ, ಕೃಷ್ಣ ನದಿ ನೀರು ಹರಿಸಿದ ಪರಿಣಾಮ, ನಾಗಠಾಣದ ವಿಭಾಗದ, ಚಡಚಣ ತಾಲೂಕಿನ ಜಿಗಜಿಣಗಿ ಕೆರೆ ಸಂಪೂರ್ಣ ಭರ್ತಿಯಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲ, ಎಕ್ಸ್ ಮಾಧ್ಯಮದಲ್ಲಿ ಸಂತಸ ವ್ಯಕ್ತ ಪಡಿಸಿ, ಚಡಚಣ ಭಾಗದ ಕೃಷಿಕರ ಮುಖದಲ್ಲಿ ನಗು ಅರಳಿದೆ. ತಮ್ಮ ದುಡಿಮೆಯ ಸಾರ್ಥಕ ಕ್ಷಣ ಎಂದು, ಬಣ್ಣಿಸಿದ್ದಾರೆ.

ಹರ್ಷ/ಹೊಂಗಲ್/ಎಕ್ಸ್ ಖಾತೆ

<><><>

ಘಟಪ್ರಭಾ ನದಿ ತೀರದ, ಪ್ರವಾಹ ಬಾಧಿತ, ಬೆಳಗಾವಿ ಜಿಲ್ಲೆ, ಅವರಾದಿ, ಅರಳಿಮಟ್ಟಿ, ಢವಳೇಶ್ವರ ಹಾಗೂ ಮಸಗುಪ್ಪಿ ಗ್ರಾಮಗಳಿಗೆ ಭೇಟಿ ನೀಡಿ, ರಾಜ್ಯಸಭೆ ಸಂಸದ ಈರಣ್ಣ ಕಡಾಡಿ, ಹಾನಿಯನ್ನು, ಅಧಿಕಾರಿಗಳೊಂದಿಗೆ ಪರಿಶೀಲಿಸಿದರು. ರಾಜ್ಯ ಸರ್ಕಾರ, ರಾಜ್ಯ ವಿಪತ್ತು ನಿರ್ವಹಣಾ ನಿಧಿ ಅಡಿ, ಅನುದಾನ ಬಿಡುಗಡೆ ಮಾಡಿ, ಸಂತ್ರಸ್ತ ರೈತರ ನೆರವಿಗೆ ಧಾವಿಸುವಂತೆ, ಆಗ್ರಹಿಸಿದರು.

<><><>

ರಾಜ್ಯಾದ್ಯಂತ, ಮುಂದಿನ 7 ದಿನ, ಅಲ್ಲಲ್ಲಿ ಚದುರಿದಂತೆ, ಹಗುರದಿಂದ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು, ಹವಾಮಾನ ಇಲಾಖೆ ತಿಳಿಸಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.